# ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 457 ವೆಚ್ಚ 6/2021 ಇ

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:4.10.2021

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಆರ್ಥಿಕ ಇಲಾಖೆ, ವಿಧಾನಸೌಧ,
ಬೆಂಗಳೂರು

ರವರಿಗೆ:

ಖಜಾನೆ ಆಯುಕ್ತರು,
ಖಜಾನೆ ಆಯುಕ್ತಾಲಯ, 5 & 6 ನೇ ಮಹಡಿ,
ಕೆಪಿಸಿಎಲ್ ಹಸಿರು ಕಟ್ಟಡ, ಅರಮನೆ ರಸ್ತೆ,
ಬೆಂಗಳೂರು–560001

ಮಾನ್ಯರೆ,

ವಿಷಯ: ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಲ್ಲಿ ಲಭ್ಯವಿರುವ ಅನುದಾನದಿಂದ ಬಾಕಿ ವೇತನ ಸೆಳೆಯಲು ಸಹಮತಿ ಕೋರಿರುವ ಬಗ್ಗೆ

ಉಲ್ಲೇಖ: ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಂದ ಸ್ವೀಕೃತವಾಗಿರುವ ಪತ್ರಗಳು

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮತ್ತು ಅವುಗಳ ವ್ಯಾಪ್ತಿಯ ಇತರೆ ಇಲಾಖೆಗಳಲ್ಲಿ ವಿವಿದ ಕಾರಣಗಳಿಂದ ಅಂದರೆ ರಜೆ ಮಂಜೂರಾತಿ, ವೇತನ ಬಡ್ತಿ, ನಿವೃತ್ತ ಮತ್ತು ಮೌತಿಯಾಗಿರುವ ಸಿಬ್ಬಂದಿಯವರ ಅವಲಂಬಿತರಿಗೆ ಬಾಕಿ ವೇತನವನ್ನು ಪಾವತಿಸಬೇಕಾಗಿರುವುದರಿಂದ ಲಭ್ಯವಿರುವ ಅನುದಾನದಿಂದ ಸೆಳೆಯಲು ಸುತ್ತೋಲೆ ಸಂಖ್ಯೆ: ಆಇ 01 ಟಿಎಫ್‌ಪಿ 2021 ದಿನಾಂಕ:3.8.2021ರಲ್ಲಿನ ಷರತ್ತನ್ನು ಸಡಿಲಗೊಳಿಸಿ ಬಾಕಿ ವೇತನವನ್ನು ಸೆಳೆಯಲು ಅವಕಾಶ ನೀಡುವಂತೆ ಸಂಬಂಧಿಸಿದ ಖಜಾನಾದಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು/ಕಾರ್ಯನಿರ್ವಾಹಕ ಅಧಿಕಾರಿಗಳು ಪತ್ರಗಳನ್ನು ಬರೆದಿದ್ದು ಸದರಿ ಪತ್ರಗಳನ್ನು ಡೌನ್ ಲೋಡ್ ಮಾಡಿ ವ್ಯವಹಾರ ಪುಟದಲ್ಲಿರಿಸಲಾಗಿದೆ. ವಿವರ ಕೆಳಕಂಡಂತೆ ಇರುತ್ತದೆ:

| ಕ್ರ.ಸಂ. | ಜಿಲ್ಲಾ/ತಾಲ್ಲೂಕು ಪಂಚಾಯತ್ | ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ | ಷರಾ |
|---|---|---|---|
| 1 | ತಾ.ಪಂ. ಮೈಸೂರು | 2515-00-102-0-61--005 | ಕಾರ್ಯದರ್ಶಿ ಗ್ರೇಡ್-1 , ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಿರಿಯ ಇಂಜಿನಿಯರ್, ಮತ್ತು ದ್ವಿತೀಯ ಲೆಕ್ಕ ಸಹಾಯಕರು ಇವರುಗಳ ಬಾಕಿ ವೇತನ ಸೆಳೆಯಲು |
| 2 | ತಾ.ಪಂ.ಕೊಳ್ಳೇಗಾಲ | 2515-00-102-0-61-005 | ಕಾರ್ಯದರ್ಶಿ ಗ್ರೇಡ್-1 , ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಬಾಕಿ ವೇತನವನ್ನು ಸೆಳೆಯಲು |
| 3 | ಜಿ.ಪಂ. ವಿಜಯಪುರ | 2515-00-101-0-28-005 | ಸಿಬ್ಬಂದಿಯವರುಗಳ ಬಾಕಿ ವೇತನವನ್ನು ಸೆಳೆಯಲು |
| 4 | ಜಿ.ಪಂ. ಮೈಸೂರು | 2515-00-101-0-28-005 | ಡಾ.ಎಸ್.ಪ್ರೇಮ್ ಕುಮಾರ್, ಉಪ ಕಾರ್ಯದರ್ಶಿ(ಆಡಳಿತ) ಬಾಕಿ ವೇತನವನ್ನು ಸೆಳೆಯಲು |

| | | | |
|---|---|---|---|
| 5 | ತಾ.ಪಂ. ಅಫಜಲಪೂರ | 2515-00-102-0-61-005 | ಶ್ರೀ ದಿಗಂಬರ ಜಕಬಾ, ಡಾಟಾ ಎಂಟ್ರಿ ಅಸಿಸ್ಟಂಟ ಇವರ ಬಾಕಿ ವೇತನ ಸೆಳೆಯಲು |
| 6 | ಜಿ.ಪಂ. ಹಾಸನ | 2210-00-101-0-27-005 | ಶ್ರೀ ಡಾ.ವೆಂಕಟೇಶ್. ಆರ್, ಹಿರಿಯ ತಜ್ಞರು ಸಮುದಾಯ ಆರೋಗ್ಯ ಕೇಂದ್ರ ಕೊಣನೂರು. ಇವರ ಬಾಕಿ ವೇತನ ಪಾವತಿಗಾಗಿ |
| 7 | ಜಿ.ಪಂ.ಕೋಲಾರ | 2515-00-101-0-28-005 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಶಿಕ್ಷಣಾಧಿಕಾರಿ, ಸಹಾಯಕ ಆಡಳಿತಾಧಿಕಾರಿ, ಕಛೇರಿ ಅಧೀಕ್ಷಕರು ಹಾಗೂ ಸರ್ಕಾರಿ ಹೋಮಿಯೋಪತಿ ಆಸ್ಪತ್ರೆ, ಇವರುಗಳ ಬಾಕಿ ವೇತನ ಸೆಳೆಯಲು |
| 8 | ತಾ.ಪಂ.ಮಾನವಿ | 2515-00-102-0-61-005 | ಶ್ರೀ ಹನುಮಂತ ತಂದೆ ಗಂಗಪ್ಪ, ಗ್ರೇಡ್-2 ಕಾರ್ಯದರ್ಶಿ ಇವರ ಬಾಕಿ ವೇತನ ಸೆಳೆಯಲು |
| 9 | ತಾ.ಪಂ.ಕೂಡ್ಲಿಗಿ | 2202-00-101-0-61-005 | ಶ್ರೀ ಜಿ.ಹೊನ್ನಪ್ಪ, ಶಿಕ್ಷಕರು ಇವರ ಬಾಕಿ ವೇತನ ಸೆಳೆಯಲು |
| 10 | ಜಿ.ಪಂ.ಮೈಸೂರು | 2515-00-101-0-28-005 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಉಪ ಕಾರ್ಯದರ್ಶಿ ಇವರುಗಳ ಬಾಕಿ ವೇತನ ಸೆಳೆಯಲು |
| 11 | ಜಿ.ಪಂ.ರಾಮನಗರ | 2515-00-101-0-28-005 | ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ರಾಮನಗರ ಇವರ ಬಾಕಿ ವೇತನ ಸೆಳೆಯಲು |
| 12 | ತಾ.ಪಂ. ನವಲಗುಂದ | 2515-00-102-0-61-005 | ಅಧಿಕಾರಿ/ಸಿಬ್ಬಂದಿಯವರ ಬಾಕಿ ವೇತನ ಸೆಳೆಯಲು |
| 13 | ತಾ.ಪಂ. ಕಾರಟಗಿ | 2515-00-102-0-61-005 | ತಾಲ್ಲೂಕು ಯೋಜನಾಧಿಕಾರಿಗಳ ಬಾಕಿ ವೇತನವನ್ನು ಸೆಳೆಯಲು |

ಪ್ರಸ್ತಾವನೆಯು ಬಾಕಿ ವೇತನವನ್ನು ಲಭ್ಯವಿರುವ ಅನುದಾನದಿಂದ ಭರಿಸಲು ಹಾಗೂ ಇದಕ್ಕಾಗಿ ಹೆಚ್ಚುವರಿ ಅನುದಾನವನ್ನು ಕೋರದಿರುವ ಷರತ್ತನ್ನು ವಿಧಿಸಿ ಬಾಕಿ ವೇತನವನ್ನು ಸೆಳೆಯಲು ಸುತ್ತೋಲೆಯ ಷರತ್ತನ್ನು ಸಡಿಲಿಸಿ ಸಹಮತಿಸಿದೆ. ಅದರಂತೆ ಬಾಕಿ ವೇತನ ಸೆಳೆಯಲು ಸಲ್ಲಿಸುವ ಬಿಲ್ಲುಗಳನ್ನು ಮಾನ್ಯ ಮಾಡುವಂತೆ ಸಂಬಂಧಪಟ್ಟವರಿ ಸೂಕ್ತ ನಿರ್ದೇಶನ ನೀಡಲು ಕೋರಲಾಗಿದೆ.

(ಸರ್ಕಾರದ ಕಾರ್ಯದರ್ಶಿಗಳು(ವೆಚ್ಚ)
ಆರ್ಥಿಕ ಇಲಾಖೆರವರಿಂದ ಅನುಮೋದಿತ)

ತಮ್ಮ ನಂಬುಗೆಯ,

(ಶ್ರೀಕೃಷ್ಣ ಎನ್ ಬುಗಟ್ಯಾಗೋಳ)
ವಿಶೇಷಾಧಿಕಾರಿ(ಜಿಪಂ) ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಆರ್ಥಿಕ ಇಲಾಖೆ

ಪ್ರತಿ:

1. ಸಂಬಂಧಪಟ್ಟ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು/ಕಾರ್ಯನಿರ್ವಾಹಕ ಅಧಿಕಾರಿಗಳು
2. ಸಂಬಂಧಪಟ್ಟ ಜಿಲ್ಲಾ/ಉಪ ಖಜಾನೆ ಅಧಿಕಾರಿಗಳಿಗೆ ಸಲ್ಲಿಸುವ ಬಿಲ್ಲುಗಳನ್ನು ಮಾನ್ಯ ಮಾಡುವ ಬಗ್ಗೆ

I/173195/2021

ಕರ್ನಾಟಕ ಸರ್ಕಾರ

ಸಂ: ಆಇ 481 ವೆಚ್ಚ 6/2021(ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:04.10.2021

**ಇಂದ:**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು-560001.

**ಇವರಿಗೆ:**
ಖಜಾನೆ ಆಯುಕ್ತರು,
ಖಜಾನೆ ಆಯುಕ್ತಾಲಯ, 5 &6 ನೇ ಮಹಡಿ
ಕೆಪಿಸಿಎಲ್ ಹಸಿರು ಕಟ್ಟಡ, ಅರಮನೆ ರಸ್ತೆ,
ಬೆಂಗಳೂರು-560001.

ಮಾನ್ಯರೆ,

ವಿಷಯ: ಶ್ರೀಮತಿ ಡಿ.ಆರ್. ಕಲಾವತಿ, ಉಪ ನಿರ್ದೇಶಕರು, ಜೈವಾನಿಲ ಯೋಜನೆ, ಇವರಿಗೆ ದಿನಾಂಕ: 01/11/2019ರಿಂದ 21/01/2020ರವರೆಗೆ ನಿರ್ದೇಶಕರ ಹುದ್ದೆಯ ಪ್ರಭಾರ ಭತ್ಯೆಯನ್ನು ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: 1) ಸುತ್ತೋಲೆ ಸಂಖ್ಯೆ: ಆಇ 01 ಟಿ.ಎಫ್.ಪಿ. 2021 ದಿನಾಂಕ: 03.08.2021
2) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಡತ ಸಂಖ್ಯೆ: RDPR 250 RRC 2021

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ ಡಿ.ಆರ್. ಕಲಾವತಿ, ಉಪ ನಿರ್ದೇಶಕರು, ಜೈವಾನಿಲ, ಇವರಿಗೆ ದಿನಾಂಕ: 01/11/2019ರಿಂದ 21/01/2020ರವರೆಗೆ ನಿರ್ದೇಶಕರು (ಯೋಉಮಾ) ಹುದ್ದೆಯ ಅಧಿಕ ಪ್ರಭಾರವನ್ನು ನಿರ್ವಹಿಸಿರುವುದರಿಂದ ವೇತನ ಶ್ರೇಣಿ ರೂ.56800-99600ರಲ್ಲಿ ಕೆಸಿಎಸ್ಆರ್ ನಿಯಮ-68ರನ್ವಯ ಮೊದಲನೇ ಮೂರು ತಿಂಗಳ ಅವಧಿಗೆ ಶೇ.7.5ರಷ್ಟು ಪ್ರಭಾರ ಭತ್ಯೆಯನ್ನು ಮಾಹೆಯಾನ ರೂ.4260/-ಗಳನ್ನು ಮಂಜೂರು ಮಾಡಲಾಗಿದೆ. ಪ್ರಸಕ್ತ ಸಾಲಿನ ಬಾಕಿ ವೇತನವನ್ನು ಸೆಳೆಯಲು ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 01 ಟಿ.ಎಫ್.ಪಿ. 2021 ದಿನಾಂಕ: 03.08.2021 ರ ಷರತ್ತನ್ನು ಸಡಿಲಿಸಿ ಬಾಕಿ ಬಿಲ್ಲುಗಳ ತೀರುವಳಿಗೆ ಮಾನ್ಯ ಮಾಡುವಂತೆ ಪ್ರಸ್ತಾಪಿಸಿರುತ್ತಾರೆ.

ಇಂತಹ ವಿಳಂಬಕ್ಕೆ ಇನ್ನು ಮುಂದೆ ಆಸ್ಪದವೀಯದಂತೆ ಕ್ರಮವಹಿಸುವಂತೆ ಷರತ್ತನ್ನು ವಿಧಿಸಿ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಲಭ್ಯವಿರುವ ಅನುದಾನದಿಂದ ಸೆಳೆಯಲು ಅನುವು ಮಾಡುವಂತೆ ಜಿಲ್ಲಾ ಖಜಾನಾಧಿಕಾರಿಗಳಿಗೆ ಸೂಕ್ತ ನಿರ್ದೇಶನವನ್ನು ನೀಡುವಂತೆ ಕೋರಿ ಆಯುಕ್ತರು, ಖಜಾನೆ ಆಯುಕ್ತಾಲಯರವರಿಗೆ ತಿಳಿಸಿದೆ.

(ಸರ್ಕಾರದ ಕಾರ್ಯದರ್ಶಿಗಳು-(ವೆಚ್ಚ)
ಆರ್ಥಿಕ ಇಲಾಖೆ ರವರಿಂದ ಅನುಮೋದಿತ)

ತಮ್ಮ ನಂಬುಗೆಯ,

(ಶ್ರೀಕೃಷ್ಣ ಎನ್. ಬುಗಟ್ಯಾಗೋಳ)
ವಿಶೇಷಾಧಿಕಾರಿ (ಜಿ.ಪರ.) ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಆರ್ಥಿಕ ಇಲಾಖೆ

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರಿಗೆ ಮಾಹಿತಿಗಾಗಿ.
2. ಜಂಟಿ ನಿರ್ದೇಶಕರು , ರಾಜ್ಯ ಹುಜೂರು ಖಜಾನೆ, ಬೆಂಗಳೂರುರವರಿಗೆ ಮುಂದಿನ ಕ್ರಮಕ್ಕಾಗಿ